O.S.No. 212/2017
PW -1

ದಿನಾಂಕಃ 05-09-2019 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣೀಕರಿಸಲಾಯ್ತು.

ಮುಖ್ಯ ವಿಚಾರಣೆ :- ಶ್ರೀ ಬಿ.ಬಿ.ಎಂ. ವಾದಿ ಪರ ವಕೀಲರಿಂದ

ನಾನು ಈ ದಿನ ನ್ಯಾಯಾಲಯಕ್ಕೆ ಸಲ್ಲಿಸಿರುವ ನನ್ನ ಪ್ರಮಾಣ ಪತ್ರದಲ್ಲಿ ತಿಳಿಸಿರುವ ಅಂಶಗಳೆಲ್ಲವೂ ಸತ್ಯವಾಗಿದೆ ಹಾಗೂ ನನ್ನ ಪ್ರಮಾಣ ಪತ್ರಕ್ಕೆ ಸಹಿಯನ್ನು ಮಾಡಿರುತ್ತೇನೆ.

ದಿ. 18/07/1968 ರ ಒಂದು ಕ್ರಯ ಪತ್ರದ ದೃಢೀಕರಣ ನಕಲನ್ನು ಹಾಜರುಪಡಿಸಿದ್ದು, ಸದರಿ ಕ್ರಯ ಪತ್ರ ಅಸಲು ಇಲ್ಲವೆಂದು ಪ್ರತಿವಾದಿ ಪರ ವಕೀಲರು ತಕರಾರು ಸಲ್ಲಿಸಿದ ಕಾರಣ ಸದರಿ ದಾಖಲೆಯನ್ನು ತಕರಾರಿಗೆ ಒಳಪಟ್ಟು ನಿಪಿ-1 ಎಂದು ಗುರುತಿಸಲಾಯಿತು. ದಾವಾ ಸ್ವತ್ತಿನ ಸಂಬಂಧಪಟ್ಟಂತೆ 7 ಪಹಣಿ ಪತ್ರಿಕೆಗಳನ್ನು ಹಾಜರುಪಡಿಸಿದ್ದು ಅವುಗಳನ್ನು ಕ್ರಮವಾಗಿ ನಿಪಿ-2 ರಿಂದ ನಿಪಿ-8 ಎಂದು , ನಮ್ಮ ಕುಟುಂಬಕ್ಕೆ ಸಂಬಂಧಪಟ್ಟಂತೆ ಒಂದು ವಂಶವೃಕ್ಷವನ್ನು ಹಾಜರುಪಡಿಸಿದ್ದು ಅದನ್ನು ನಿಪಿ-9 ಎಂದು, ದಾವಾ ಸ್ವತ್ತಿನ ಸಂಬಂಧ ಒಂದು ಆಕಾರ್ ಬಂದ್ ಉತಾರ್ ನ್ನು ಹಾಜರುಪಡಿಸಿದ್ದು ಅದನ್ನು ನಿಪಿ-10. ಎಂದು, ದಾವಾ ಸ್ವತ್ತಿನ ಸಂಬಂಧ ಒಂದು ಪಕ್ಕಾ ಬುಕ್ಕಿನ ದೃಢೀಕೃತ ನಕಲನ್ನು ಹಾಜರುಪಡಿಸಿದ್ದು ಅದನ್ನು ನಿಪಿ-11 ಎಂದು, ದಾವಾ ಸ್ವತ್ತಿನ ಸಂಬಂಧ ಆರ್ ಆರ್ ಟಿ(ಎ) ನಂ- 186/2007-08 ರ ಅಪೀಲು ಅರ್ಜಿಯ ದೃಢೀಕೃತ ನಕಲು , ಆದೇಶದ ಪುಟದ ದೃಢೀಕೃತ ನಕಲುಗಳನ್ನು ಹಾಜರುಪಡಿಸಿದ್ದು ಅವುಗಳನ್ನು ಕ್ರಮವಾಗಿ ನಿಪಿ-12 ಮತ್ತು ನಿಪಿ-13 ಎಂದು ಗುರುತಿಸಲಾಯಿತು.

( ಈ ಹಂತದಲ್ಲಿ ವಾದಿ ಪರ ವಕೀಲರು ಮುಂದುವರೆದ ಮುಖ್ಯ ವಿಚಾರಣೆಗೆ ಕಾಲವಕಾಶ ಕೋರಿದ್ದರಿಂದ ನೀಡಲಾಯಿತು)

(ತೆ ನ್ಯಾ ನ ಉ ಲೇ ಬೆ ಮಾ )

ಓ ಹೇ ಕೇ ಸ ಇ ಎ ಒ

(ಅಬ್ದುಲ್ ರಹಿಮಾನ್ ಎ. ಮುಲ್ಲಾ)
ಪ್ರಧಾನ ಸಿವಿಲ್ ಜಡ್ಜ್, ಮಧುಗಿರಿ